# ಜೀವದ ಹನಿಗಳಿಗೊಡ್ಡಿದ ಬೊಗಸೆ



## ನಾಂದಿಪದ

**ಮಣ್ಣಿನ** ಮೇಲಷ್ಟೇ ಅಲ್ಲ, ಮೈಮನಗಳ ಮೇಲೆಯೂ ಮಳೆ ನೇರ ಪ್ರಭಾವ ಬೀರಬಲ್ಲದು; ಸೃಜನಶೀಲ ಮನಸ್ಸಿನ ಅಭಿವ್ಯಕ್ತಿಗೆ ಪ್ರೇರಣೆಯಾಗಿ ಪರಿಣಮಿಸಬಲ್ಲದು. ಈ ಪ್ರೇರಣೆ ಜೀವಪರವಾಗಿ ಇರಬಹುದು, ಜೀವನೋತ್ಸಾಹಕ್ಕೆ ಕುಂದು ತರುವಂತೆಯೂ ಇರಬಹುದು. ಕರುಣೆಯ ಸಂಕೇತವಾದ ಮಳೆ ಕಠೋರವಾಗಿಯೂ ಇರಬಲ್ಲದು. ಮಳೆ ಬದುಕಿನುದ್ದಕ್ಕೂ ಜೀವನ ಹಾಗೂ ಭಾವಕೋಶದ ಭಾವವಾಗಿ ಇರುವುದನ್ನು ನಮ್ಮ ಅನುಭವಕ್ಕೆ ತರುವ ವಿಶಿಷ್ಟ ಬರಹ ‘ಮಳೆಯ ಉತ್ತರ ದಕ್ಷಿಣಗಳು’ ಈ ಸಂಚಿಕೆಯ ವಿಶೇಷ. ಪುರುಷೋತ್ತಮ ಬಿಳಿಮಲೆ ಅವರ ಈ ಮಳೆಪ್ರಬಂಧ ಮಳೆಯ ಬಹುಮುಖಿ ಸಾಧ್ಯತೆಗಳನ್ನು ಚಿತ್ರಿಸುವುದರ ಜೊತೆಗೆ, ದೇಶ–ಕಾಲಕ್ಕೆ ತಕ್ಕಂತೆ ವರ್ಷಋತುವಿನಲ್ಲಿ ಆಗಿರುವ ಬದಲಾವಣೆಗಳನ್ನೂ ಸೂಚಿಸುವಂತಿದೆ. ನೆಲವೆಲ್ಲ ಧಗೆಯ ಹಾಸಿಗೆಯಾಗಿ, ನಾಡಿಗೆ ನಾಡೇ ಮಳೆಯ ಧ್ಯಾನದಲಿ ಮುಳುಗಿರುವ ಸಂದರ್ಭದಲ್ಲಿ ಬಿಳಿಮಲೆಯವರ ಬರಹಕ್ಕೆ ಮಳೆಯಂತೆಯೇ ಮನಸ್ಸನ್ನು ಆವರಿಸಿಕೊಳ್ಳುವ ಶಕ್ತಿಯಿದೆ.

‘ಮಲಯಾಳಂ ಕಥೆಗಳು’ ಕೃತಿಗಾಗಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಅನುವಾದ ಪ್ರಶಸ್ತಿ ಪಡೆದಿರುವ ಕೆ.ಕೆ. ಗಂಗಾಧರನ್ ಅವರ ಸಂದರ್ಶನ ಈ ಸಂಚಿಕೆಯ ಮತ್ತೊಂದು ವಿಶೇಷ. ಕನ್ನಡ–ಮಲಯಾಳಂ ಭಾಷೆಗಳ ನಡುವೆ ಕೊಂಡಿಯಾಗಿರುವ ಗಂಗಾಧರನ್ ಅವರ ಬರವಣಿಗೆಯ ಬದುಕಿನ ತುಂಬ ಕನ್ನಡಪ್ರೇಮ ಹಾಗೂ ಸಾಹಿತ್ಯಪ್ರೀತಿ ತುಂಬಿಕೊಂಡಿರುವುದನ್ನು ಗಮನಿಸಬಹುದು. ಬರವಣಿಗೆಯ ಭಾಗವಾಗಿರುವ ಸಮ್ಮಾನ ಹಾಗೂ ಅವಮಾನಗಳನ್ನೂ ಈ ಮಾತುಕತೆ ಸಹೃದಯರ ಗಮನಕ್ಕೆ ತರುತ್ತಿದೆ.

ತೇರ್‌ಳಿ ಶೇಖರ್ ಕನ್ನಡಕ್ಕೆ ತಂದಿರುವ ಮಲಯಾಳಂ ಕವಿತೆಗಳು ಹಾಗೂ ‘ಕಾವ್ಯಸಂಕ’ದ ರಚನೆಗಳೂ ಸೇರಿದಂತೆ ಈ ಸಂಚಿಕೆಯುದ್ದಕ್ಕೂ ಕವಿತೆಗಳು ಹರಡಿಕೊಂಡಿವೆ. ಮಳೆಯ ಘಮ ಹಾಗೂ ಜೀವಶಕ್ತಿಯನ್ನು ಹೊಂದಿರುವ ಈ ರಚನೆಗಳು ತಮ್ಮ ವೈವಿಧ್ಯದಿಂದಲೂ ಗಮನಸೆಳೆಯುವಂತಿವೆ. ಕಾವ್ಯ, ಕಥನ, ಪ್ರಬಂಧ, ಸಂದರ್ಶನ, ವಿಮರ್ಶೆ, ಅಂಕಣಗಳೊಂದಿಗೆ, ಗುಣ ಹಾಗೂ ವೈವಿಧ್ಯದಿಂದ ಕೂಡಿರುವ– ಜೀವದ ಹನಿಗಳಿಗೆ ಒಡ್ಡಿದ ಬೊಗಸೆಯಂತಿರುವ– ಮಳೆಋತುವಿನ ಮೊದಲ ಸಂಚಿಕೆ ನಿಮಗೆ ಪ್ರಿಯವೆನ್ನಿಸುತ್ತದೆನ್ನುವ ವಿಶ್ವಾಸ ನಮ್ಮದು.

**ಮಯೂರ ಬಳಗ**

editormy@mayura.co.in